**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.1511/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ಃ ಸಂಗಪ್ಪ ತಂದೆ ಶಿವಪ್ಪ ಮದ್ದೂರ ,
ವಃ 25 ವರ್ಷ, ಉಃ ಕೂಲಿ ಕೆಲಸ,
ಸಾಃ ಹಾಬಾಳ ಟಿ. ಗ್ರಾಮ,
ತಾಃ ಸೇಡಂ, ಜಿಃ ಕಲಬುರಗಿ.

----

**ದೋಷಾರೋಪಣೆ**

ನಾನು ಶ್ರೀಮತಿ ಲಲಿತಾ ಕುದರಿಮತಿ, ಬಿಕಾಂ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 23-05-2022ರಂದು ರಾತ್ರಿ 12.15 ಗಂಟೆ ಸುಮಾರಿಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಹಾಬಾಳ ಟಿ. ಗ್ರಾಮದಲ್ಲಿ ಚಾಸಾ 1 ನ್ನೆದ್ದವರು ಮನೆಯಲ್ಲಿ ಮಲಗಿಕೊಂಡಾಗ ಆರೋಪಿತನು ಅಕ್ರಮ ಪ್ರವೇಶ ಮಾಡಿ ಮನೆಯ ಬಾಗಿಲು ತೆರೆದು ಒಳಗಡೆ ಬಂದಿದ್ದು ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ. 448 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ. 1ೀವರ ಮನೆಗೆ ರಾತ್ರಿ ವೇಳೆ ಅಕ್ರಮ ಪ್ರವೇಶ ಮಾಡಿ ಚಾಸಾ 1ಎಚ್ಚರಗೊಂಡು ಗಾಬರಿಯಿಂದ ಆರೋಪಿತನಿಗೆ ಕೇಳಲಾಗಿ ಸದರಿ ಆರೋಪಿತನಾದ ನೀನು ನಿನ್ನ ಮೇಲೆ ಮನಸಾಗಿದೆ ಎಂದು ಸೀರೆ ಸೆರಗು ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿದ್ದು ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ. 354(ಎ)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ರಾತ್ರಿ ವೇಳೆ ಅಕ್ರಮ ಮನೆ ಪ್ರವೇಶ ಮಾಡಿ ಚಾಸಾ.1ರವರಿಗೆ ನಿನ್ನ ಮೇಲೆ ಮನಸಾಗಿದೆ ಎಂದಾಗ ಅವರು ಒಪ್ಪದಿರುವ ಕಾರಣ ಏ ರಂಡಿ ಮಗಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ಭಾ.ದಂ.ಸಂ. 504ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ.1 ಅವರ ಮನೆ ಅಕ್ರಮ ಪ್ರವೇಶ ಮಾಡಿ ನಿನ್ನ ಮೇಲೆ ಮೇಲೆ ಮನಸಾಗಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಗ ಅವರು ಒಪ್ಪದಿರುವ ಕಾರಣ ನಿನಗೆ ಬಿಡುವುದ್ಲಿ ಖಲ್ಲಾಸ ಮಾಡುತ್ತೇನೆ ಅಂತಾ ಜೀವದ ಭೆದರಿಕೆ ಹಾಕಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ

ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

Sd/-

ದಿನಾಂಕಃ 04-06-2024

ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.1511/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಕುರಕುಂಟಾ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿ ಃ ಸಂಗಪ್ಪ ತಂದೆ ಶಿವಪ್ಪ ಮದ್ದೂರ ,
ವಃ 25 ವರ್ಷ, ಉಃ ಕೂಲಿ ಕೆಲಸ,
ಸಾಃ ಹಾಬಾ ಟಿ. ಗ್ರಾಮ,
ತಾಃ ಸೇಡಂ, ಜಿಃ ಕಲಬುರಗಿ.

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

Sd/-

ದಿನಾಂಕ 04-06-2024 ಪ್ರ.ದ.ನ್ಯಾ.ದಂ. ಸೇಡಂ.